ಹಾದಿಯಿಂದಾದರೂ ನನ್ನ ಸೊಸೆ ಹೊಟ್ಟೆಗೆ ಒಂದು ಇಲುಕು ಕೊಡಪ್ಪ, ಇಲ್ಲಾಂದ್ರೆ ಈ ಮನೆ ಆಸ್ತಿಪಾಸ್ತಿ ಕಂಡವರ ಪಾಲಾದೀತು' ಎಂದು ತನ್ನೊಳಗಿನ ವೇದನೆಯನ್ನು ಹೊರಹಾಕಿದಳು, ಗೊಣಗಿದಳು, ಎದೆ ಬಡಿದುಕೊಂಡಳು.

ಅರ್ಧರಾತ್ರಿಯಲ್ಲಿ ಅಜ್ಜಿಯ ವೇದನೆ, ವನಜಾಕ್ಷಿ ಎದೆಯೊಳಗೆ ಹೊತ್ತು ಬೇಯುತ್ತಿರುವ ಸಂಕಟವೂ ಒಂದೇ. ಮೊದಮೊದಲಿಗೆ ಒಪ್ಪದ ಮನಸ್ಸು, ಹದವಾದ ಮಳೆ, ತಣ್ಣನೆ ಕುಳಿರ್ಗಾಳಿ ಮೈ ಮನವನ್ನೆಲ್ಲ ತಲ್ಲಣಿಸಿತು. ಯಾವುದೋ ಬೆಚ್ಚನೆ ಸುಖ ಬೇಕೆಂದು ಹಂಬಲಿಸುವವಳಿಗೆ ತುಂತುರು ಮಳೆ ಚಿಟಚಿಟ ಸದ್ದು. ಈ ಬೆದೆ ಕಾಲದಲ್ಲಿ ಬೀಜ ಬಿತ್ತಿದರೆ ಮೊಳಕೆಯೊಡೆಯದೇ ಇರಲಾರದು. ಒಳ್ಳೆಯ ಬೀಜ ಬಿತ್ತುವ ಕಟ್ಟುಮಸ್ತಾದವನು ಬೇಕೆನ್ನಿಸಿತು. ಆ ಹೊತ್ತು ಎಲ್ಲ ಎಲ್ಲೆಯನ್ನೂ ಮೀರಿ ಬಂದ ಆ ಪೋಲಿ ಹುಡುಗ ಈಗ ಎಲ್ಲಿ ಸಿಗುವನೋ ಗೊತ್ತಿಲ್ಲ. ಅವನು ಈ ಹೊತ್ತು ಇದ್ದಿದ್ದರೆ ಅದೆಂಥ ಸುಖದ ಲೋಲುಪತೆಯಲ್ಲಿ ತೇಲಿ ಬಿಡುತ್ತಿದ್ದೆ. 'ಅಬ್ಬಾ!' ಅವನೆಂಥ ಒರಟ!

* * *

ಮಳೆಯಿಂದ ತೊಯ್ದ ಗಿಡಮರ, ಹೂಬಳ್ಳಿ. ಕಿಟಕಿ ಬಳಿ ನಿಂತ ವನಜಾಕ್ಷಿ ತಾನೇ ವನವಾದಳು. ನಡುರಾತ್ರಿಯಲ್ಲಿ ಯಾರೋ ಕದ ತಟ್ಟದ ಸದ್ದು. 'ಓಹೋ, ಅವನೇ ಕಳ್ಳ ಹುಡುಗನೇ ಇರಬೇಕು. ಅವನು ಈ ಹೊತ್ತಿನಲ್ಲಿ ನನ್ನನ್ನೇ ಹುಡುಕಿಕೊಂಡು ಬಂದಿರಬಹುದು. ಅಂದರೆ ಅವನಿಗೂ ನನ್ನಂತೆ ಭಾವನೆಗಳು ಕಾಡಿರಬೇಕು. ಇಲ್ಲದಿದ್ದರೆ ಅವನೇಕೆ ಈ ಹೊತ್ತಿನಲ್ಲಿ ಕದ ತಟ್ಟುತ್ತಿದ್ದ' ಎಂದು ಅವನು ಬರುವ ಸಂಭ್ರಮಕ್ಕೆ ಬೀಗಿದಳು. ಓಡಿ ಹೋಗಿ ಕದ ತೆರೆದಳು.

* * *

ಬಾಗಿಲನ್ನು ತೆಗೆಯುವ ಹೊತ್ತಿಗೆ ಸಿಡಿಲು, ಕಣ್ಣು ಕುಕ್ಕಿದ ಮಿಂಚು. ಹಾಳಾದ ಕರೆಂಟು ಹೋಯಿತು. ಕಡುಕತ್ತಲೆಯಲ್ಲಿ ಅವನೋ, ಇಲ್ಲ ಮನೆಗಳ್ಳನೋ! ಪತ್ತೆ ಹಚ್ಚಲು ದೀಪ ತರಲು ಬಿಡಲಿಲ್ಲ. ಬಿಗಿದಪ್ಪಿ ಚಿರತೆ ಬಿಸಿರಕ್ತ ಕುಡಿಯಲು, ಹಸಿಮಾಂಸ ತಿನ್ನಲು ಹೊತ್ತೊಯ್ಯುವಂತೆ ಬಯಲಿಗೆ ಎಳೆದು ಒಯ್ದನು. ಅವನಲ್ಲಿ ಅದೇ ಹುಡುಗನ ಮಾದರಿ ಗಡಸುತನ. ಮುಖ ನೇವರಿಸಿದರೆ ಅದೇ ಚಿಗುರು ಮೀಸೆ, ತಿಳಿಯಾದ ಗಡ್ಡ. 'ಓಹೋ ನಾನು' ಎಂದು ಹೇಳಿ ಕೊಳ್ಳಲು ನಿನಗೇನು ದಾಡಿ?' ಎಂದು ಈಗ ಕೇಳಲು ಸಾಧ್ಯವಾಗದಷ್ಟು ಅವನು ನನ್ನೊಳಗೆ ಸೇರಿಬಿಟ್ಟಿದ್ದಾನೆ. ಅಷ್ಟೊಂದು ಗಾಢ ಮೌನ. ಎದುಸಿರು, ಸುಖದ ನರಳಿಕೆ, ಸ್ವಲ್ಪ ನಿಧಾನ, ಅಷ್ಟೊಂದು ಆತುರ ಬೇಡ. ಇವನು ಅವನೇ ತಾನೆ? ಎಂದು ಗುರುತಿಸಿ ಕೊಳ್ಳಬೇಕೆನಿಸಿತು. ಅವನು 'ಹೌದು ನಾನೇ' ಎಂದು ಮುಕ್ಕರಿದನು. ಆಗಾಗ ಬಂದು ಹೋಗುವ ಕರೆಂಟ್ ಪರಿಪೂರ್ಣ ಸುಖಕ್ಕೆ ಅಡ್ಡಿಪಡಿಸುತ್ತಿತ್ತು. ಮೂಲೆಯಲ್ಲಿ ಮಲಗಿರುವ ಮುದುಕಿಯ ಗೂರಲು, ಗಂಡನ ಗೊರಕೆಗೆ ಹೆದರಿಕೊಂಡನೇನೋ, ಮಿಂಚಿನಂತೆ ನಾಪತ್ತೆಯಾದನು.

* * *

ಹದವಾದ ಮಳೆಗೆ ಊರಿನ ರೈತರೆಲ್ಲ ಬಿತ್ತನೆ ಮಾಡಲು ಸಿದ್ಧತೆ ನಡೆಸಿದರು. ನೇಗಿಲು, ರಾಸುಗಳೊಂದಿಗೆ ಹೊಲದ ಕಡೆಗೆ ಹೊರಟಿದ್ದರು. ವನಜಾಕ್ಷಿಯ ಗಂಡನೂ ಕೂಡ 'ಹಿಟ್ಟಿನ ಬುತ್ತಿ ಹೊತ್ತು, ಹೊತ್ತಿಗೆ ಮುನ್ನ ಬಾ' ಎಂದನು. ಒಲೆ ಮೇಲೆ ಇಟ್ಟ ಅನ್ನದ ಅಗುಳು ಬೆಂದಿರುವುದನ್ನು ಗುರುತಿಸಿಕೊಂಡಳು. ಘಮ್ ಎನ್ನುವ ತಿಳಿ ಬೇಳೆಸಾರಿನೊಂದಿಗೆ ಪುಟ್ಟಿ ಹೊತ್ತು ನಡೆದಳು. ಹೊಲ ಉತ್ತು ಸಾಕಾದ ಗಂಡ ರಾಜಶೇಖರನ ಬೆವರಿನ ವಾಸನೆ ಹೊಲದ ತುಂಬೆಲ್ಲ ಹರಡಿತ್ತು. ಅಲ್ಲಲ್ಲಿ ಬಿತ್ತಿದ ಬೀಜ, ಭೂಮಿ ಸೇರಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದವು. ಇನ್ನೊಂದು ಹದವಾದ ಮಳೆ ಬಿದ್ದರೆ ಸಾಕು ಎಂಬ ಮಾತಿನಲ್ಲಿ ತೊಡಗಿಕೊಂಡಂತೆ ಭಾಸವಾಗುತ್ತಿತ್ತು.

ಬೀಜ ಬಿದ್ದ ಹೊಲದಲ್ಲಿ ಉಣ್ಣಲು ಕುಂತ ರಾಜಶೇಖರ. ಹೆಂಡತಿ ವನಜಾಕ್ಷಿ ಮೊಗದಲ್ಲಿ ಏನೋ ಮಂದಹಾಸ, ತಿಳಿಯಾದ ನಗು. 'ಏನು ಇಷ್ಟೊಂದು ಉಲ್ಲಾಸವಾಗಿದ್ದೀಯಲ್ಲ, ಕಾರಣ ಏನು?' ಎಂದು ಕೇಳಬೇಕೆಂದುಕೊಂಡನು. ಅವಳು ಏನೆಂದು ಕೊಂಡಾಳೋ ಅಥವಾ ನನಗೇ ಏನಾದರೂ ತಿರುಗಿ ನಿಂದಿಸಿಬಿಡುವಳೋ ಎಂಬ ಭಯ. ಅವಳ ಮುಖ ಕಂಡರೂ ಕಾಣದಂತೆ ಹೊಲದ ಚೆಲುವನ್ನು ಕಣ್ಣಲ್ಲೇ ತುಂಬಿಕೊಂಡನು.

* * *